ಬೆಂಗಳೂರು ಡಿಸ್ಟ್ರಿಕ್ಟ್.

ತಾರೀಖು 23ನೇ ಸೆಪ್ಟಂಬರ್ 1896.

ಬೆಂಗಳೂರು ಸಿಟಿ ಕೋಟೆ ಸರಹದ್ದು ಹೊಸ ತರುಗಿನಪ್ಯಾಟೇಲಿ ಸರ್ವೆ ಇಲಾಖೇ ಕ್ಲಾಸರ್ ನಾರಾಯಣಜಯರಾವ ಯಂಬವರ ಮನೆ ಬಾಗಲಿಗೆ ಹಾಕಿದ್ದ ಬೀಗವನ್ನು ತಾರೀಖು 6—9—96ರಲ್ಲು ಯಾರೋ ತೆಗದುಬಿಟ್ಟು ವಳಗೆ ಪೆಟ್ಟಿಗೆಗಳಿಂದ ಕಳವು ಮಾಡಿ ಕೊಂಡು ಹೋದ ತಪ್ಸೀಲ್ ಪಟ್ಟಿ: —

		ಕ್ರಯ ರೂ.	ಆ.	ಪೈ.
1	ಕಲಾಬತು ಮೂರು ಬೊಟ್ಟು ಆಗಲ ಅಂಚು ಮತ್ತು ಬಂದು ಮಳ ಕಡಗುವುಳ್ಳ ಕೆಂಪು ಪೀತಾಂಬ್ರ	100	0	0
2	ಲಕ್ಷ್ಮೀಶ್ವರದ ಕೆಂಪು ಅಂಚಿನ ರೇಷ್ಮಿ ಚಾರಖಾನೆ ಸೀರಿ ಬಂದು	22	0	0
3	ಪೂನಾದ್ದು ಬೆಳ್ಳಿಬಟ್ಟು ಇದರ ತೂಕ ರೂ. 16—2	19	0	0
4	ಡಿಟೋ ಬೆಳ್ಳಿವುದ್ಧರಣಿ ತೂಕ ರೂ. 6—11—0	8	4	0
5	ಎರಡು ಬೆಳ್ಳಿಬಟ್ಟು ತೂಕ ರೂ. 11—10—0	14	0	0
6	ಬೆಳ್ಳೀದು ಬಟ್ಟು ಸಾದಾ ತೂಕ ರೂಪಾಯಿ 4—0—0	4	0	0
7	ಬೆಳ್ಳಿ ಕಾಲುಂಗರ 14—0—0 ರೂ. ತೂಕ	14	0	0
8	ಬೆಳ್ಳಿ ಡಾಖು 1ಕ್ಕೆ 16—0—0 ರೂ. ತೂಕ	16	0	0
9	ಅಪರಂಜಿ ಎಂಟು ಮೊಲೆ ವುಂಗ್ರ ತೂಕ ರೂ. 1—0—0	28	0	0
10	ನವರ್ತ ಬಾಬತು ಓಲೆ ಸಾದಾ ವುಂಗ್ರ ರೂ. 0—12—0 ತೂಕ	18	0	0
11	ಶಾಲ್ಯದ ರೇಷ್ಮಿ ಅಂಚಿನ ಹೊಸ ಪಂಚೆ	4	0	0
12	ಕಲಾಬತು ಕೆಂಪು ಶಾಲು	15	0	0
13	2 ಭಂಗಾರದ ಜೋಮಾಲೆ ಗುಂಡು ರೂ. 0—1—0 ತೂಕ	1	4	0
14	ಚಿನ್ನದ ಸಾದಾ ಗುಂಡುಗಳು ಸುಮಾರು 12 ಅಥವಾ 16	8	0	0
15	ಕಪ್ಪು ರೇಷ್ಮಿಲಿ ಕಟ್ಟಿದ ಹುಡುಗರಿಗೆ ಕಟ್ಟುವ ಗೆಜ್ಜೆಗಳು	8	0	0
16	ಬೆಳ್ಳಿ ನಕ್ಷ್ಯದ ಡಬ್ಬಿ ರೂ. 2—0—0 ತೂಕ	4	0	0
17	ಬೆಳ್ಳಿ ದೀವಿಗೆ ವುಂಗಳ ಗಾರಿ ಕೇರಿ ರೂ. 8—0—0 ತೂಕ	8	0	0
18	3 ಕುಬಸಗಳು	3	0	0
	ಜಮ್ಲ ..	294	8	0

ಬಿ ಕುಪ್ಪುಸಾಮಿನಾಯುಡು,
ಫಾರ್ ಅಸಿಸ್ಟೆಂಟ್ ಸೂ|| ಆಫ್ ಪೋಲೀಸ್.

ಬೆಂಗಳೂರ್ ಸಿಟಿ ಮ್ಯುನಿಸಿಪಲ್ ಬೋರ್ಡಿನಿಂದ.

ಇಸ್ತಿಹಾರ್ನಾಮೆ.

ಬೆಂಗಳೂರು ಟೌನ್ ಮ್ಯುನಿಸಿಪಲ್ ರೆಗ್ಯುಲೇಷ್ಟಗಳ ಇದರಡಿ ಬರುವ ಸೆಕ್ಷ್ಟಗಳು ಸರ್ವರ ತಿಳುವಳಿಕೆ ಬಗ್ಯೆ ಪ್ರಕಟಿಸಲ್ಪಟ್ಟಿರುತ್ತವೆ.

ಪ್ರಸಿಡೆಂಟರಿಗೆ ಹೊಸಕಟ್ಟಗಳನ್ನು ಕುರಿತು ನೋಟಿಸ್ ಕೊಡಲ್ಪಡತಕ್ಕದ್ದು.

148. ಯಾವದಾದರೂ ಬೀದಿಯಲ್ಲಾಗಲಿ ಬೀದಿಯ ಸಮೀಪದಲ್ಲಾಗಲಿ ಯಾವ ಕಟ್ಟಣವನ್ನಾದರೂ ಕಟ್ಟಿಸಲಿಕ್ಕೆ ಅಥವಾ ಖೋಲಬಂದಿ ಮಾಡಿಸಲಿಕ್ಕೆ ಪುರೂ ಮಾಡುವದಕ್ಕೆ ಮುಂಚಿತವಾಗಿ ಅಂಥಾ ಕಟ್ಟಣವನ್ನು ಕಟ್ಟಿಸಲಿಕ್ಕೆ ಯಾ ಖೋಲಬಂದಿ ಮಾಡಲಿಕ್ಕೆ ಖಾಯಿಷ್ ಮಾಡುವ ಮನುಷ್ಯನು ಆ ವಿಷಯವನ್ನು ಕುರಿತು ಬರವಣಿಗೆ ಮೂಲಕ ಪ್ರಸಿಡೆಂಟರಿಗೆ ನೋಟಿಸ್ ಕೊಡತಕ್ಕದ್ದಲ್ಲದೆ ಪ್ರಸಿಡೆಂಟರ ಹುಕುಂ ಅನುಸರಿಸಿ ನಿಷ್ಕರ್ಷೆ ಮಾಡೋಣಾವಾದ ಬಂದು ಮಟ್ಟದ ವಿಷಯದಲ್ಲಿ ಅಂಥಾ ಕಟ್ಟಣದ ತಳಾದಿಯು ಯಲ್ಲಕ್ಕೂ ಕೇಳ್ಪಟ್ಟ ತಳವರಿಕೆಯೂ ಯಾವ ಮಟ್ಟದ ಪ್ರಕಾರ ಹಾಕಲ್ಪಡುತ್ತೋ ಆ ಮಟ್ಟವನ್ನು ಕಾಣಿಸಿ ಒಂದು ಪ್ಲೆನ್ ಯಾನೆ ನಕ್ಷೆಯು ಸದರೀ ನೋಟಿಸ್ ಸಂಗಡ ಕಳುಹಿಸತಕ್ಕದ್ದು: ಯಾವನು ಅಂಥಾ ನೋಟಿಸ್ ಕೊಡದೆ ತಪ್ಪುತ್ತಾನೋ ಅವನು ಐವತ್ತು ರೂ ಪಾಯಿಗೆ ಮೀರದ ಜುರ್ಮಾನೆಗೆ ಗುರಿಯಾಗತಕ್ಕದ್ದು.

ರಸ್ತೇರಗಳು ನಡಿಯುತ್ತ ಇರುವಲ್ಲಿ ಆಡ್ಡ (ಮರ ಮೈರೆ) ಕಟ್ಟಿಸತಕ್ಕದ್ದು.

175. ಯಾವದಾದರೂ ಬೀದಿಗೆ ಯಾ ಕಾಲುದಾರಿಗೆ ಅಡ್ಡವಾಗಿರುವ ಅಥವಾ ಅಂಥಾ ಕಾಮುಗಾರಿಯಿಂದ ಅಸಂದರ್ಭ ವುಂಟಾಗಿರುವ ಸ್ಥಳದಲ್ಲಿ ಯಾವದಾದರೂ ಕಟ್ಟಣವನ್ನು ಕಟ್ಟಿಸಲಿಕ್ಕೆ ಅಥವಾ ಕೆಡವಿಸಲಿಕ್ಕೆ ಯಾವದಾದರೂ ಕಟ್ಟಣ ಹೊರಗಿನ ಭಾಗವನ್ನು ಬದಲಾಯಿಸಲಿಕ್ಕೆ ಯಾ ರಿಪೇರಿ ಮಾಡಿಸಲಿಕ್ಕೆ ಅಪೇಕ್ಷಿಸುವ ಪ್ರತಿ